# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 94
ಮಾನ್ಯ ಸದಸ್ಯರ ಹೆಸರು : ಶ್ರೀ ಕೆ.ಎ ತಿಪ್ಪೇಸ್ವಾಮಿ (ನಾಮ ನಿರ್ದೇಶನ ಹೊಂದಿರುವವರು)
ಉತ್ತರಿಸುವ ದಿನಾಂಕ : 13.02.2024
ಉತ್ತರಿಸುವ ಸಚಿವರು : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಬೆಂಗಳೂರು-ಮೈಸೂರು ತಡೆರಹಿತ ರಸ್ತೆ ನಿರ್ಮಾಣದ ಭಾಗವಾಗಿ ಸಂಪರ್ಕ ಕಲ್ಪಿಸುವ ಫೆರಿಫೆರಲ್ ರಿಂಗ್ ರಸ್ತೆ ಹಾಗೂ ಲಿಂಕ್ ರಸ್ತೆ ನಿರ್ಮಾಣಕ್ಕೆ ನೈಸ್ ಸಂಸ್ಥೆಗೆ ಫ್ರೆಂ ವರ್ಕ್ ಅಗ್ರಿಮೆಂಟ್ ಮತ್ತು ಸುಪ್ರೀಂಕೋರ್ಟ್ ಆದೇಶದ ಅನ್ವಯ ನೀಡಬೇಕಾಗಿರುವ ಒಟ್ಟಾರೆ ಜಮೀನಿನ ವಿಸ್ತೀರ್ಣ ಎಷ್ಟು; ತಾಲ್ಲೂಕುವಾರು, ಗ್ರಾಮವಾರು ಮತ್ತು ಸರ್ವೆ ನಂಬರ್ ಗಳವಾರು ಪೂರ್ಣ ಮಾಹಿತಿ ನೀಡುವುದು;</td><td>
ಬಿಎಂಐಸಿ ಯೋಜನೆಗೆ ಸಂಬಂಧಿಸಿದಂತೆ ಫ್ರೇಂವರ್ಕ್ ಅಗ್ರಿಮೆಂಟ್ ಷೆಡ್ಯೂಲ್-1 ರಂತೆ ನೈಸ್ ಸಂಸ್ಥೆಗೆ ಕೆಳಕಂಡಂತೆ ಜಮೀನುಗಳನ್ನು ಹಸ್ತಾಂತರಿಸಬೇಕಾಗಿರುತ್ತದೆ.
<table>
<tr><th colspan="4">Land</th></tr>
<tr><th></th><th colspan="2">TOTAL</th><th>TOTAL</th></tr>
<tr><th></th><th>GOVT.</th><th>PVT.</th><th>(Acres)</th></tr>
<tr><td>Toll Road</td><td>1,499</td><td>5,500</td><td>6,999</td></tr>
<tr><td>Township 1</td><td>328</td><td>2,447</td><td>2,775</td></tr>
<tr><td>Township 2</td><td>614</td><td>1,222</td><td>1,836</td></tr>
<tr><td>Township 4</td><td>684</td><td>931</td><td>1,615</td></tr>
<tr><td>Township 5</td><td>2,592</td><td>90</td><td>2,682</td></tr>
<tr><td>Township 7</td><td>1,239</td><td>3,047</td><td>4,286</td></tr>
<tr><td>TOTAL</td><td>6,956</td><td>13,237</td><td>20,193</td></tr>
</table>
ಮಾನ್ಯ ಸರ್ವೋಚ್ಚ ನ್ಯಾಯಾಲಯದ ಆದೇಶದನ್ವಯ W.P No. 29221/1997 ರಂತೆ ಹೆಚ್.ಟಿ.ಸೋಮಶೇಖರ್ ರೆಡ್ಡಿ ವಿರುದ್ಧ ಸರ್ಕಾರ ಪ್ರಕರಣದಲ್ಲಿ ಪ್ಯಾರಾ 51 ರಲ್ಲಿ ಬಿಎಂಐಸಿ ಯೋಜನೆಗೆ ಬೇಕಾಗಿರುವ ಜಮೀನುಗಳನ್ನು ಎಕ್ಸ್ ಪ್ರೆಸ್ ರಸ್ತೆ, ಫೆರಿಫೆಲ್ ರಸ್ತೆ ಮತ್ತು ಲಿಂಕ್ ರಸ್ತೆಗೆ ಈ ಕೆಳಕಂಡಂತೆ ನಮೂದಿಸಲಾಗಿದೆ.<br><br>
51. Under the Project respondent No.2 has to construct a 162 Kms of road requiring 6999 acres, details of which are as follows:<br>
1. Expressway – 111 K.ms including interchanges toll Plazas etc., 4528 acres:<br>
2. Peripheral road 41 K.ms 2193 acres:<br>
3. Link road 9.8 Kms 278 acres:<br>
Totaling 6999 acres<br><br>
ಈ ಕಛೇರಿಯಿಂದ ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನ ಪಟ್ಟಿಯನ್ನು ಅನುಬಂಧ-1ರಲ್ಲಿ ಲಗತ್ತಿಸಿದೆ.
</td></tr>
<tr><td>ಆ)</td><td>ಸರ್ಕಾರವು ಅಗ್ರಿಮೆಂಟ್ ಅನ್ವಯ ಇದುವರೆಗೂ ನೈಸ್ ಸಂಸ್ಥೆಗೆ ಹಸ್ತಾಂತರಿಸಿರುವ ಸರ್ಕಾರಿ ಮತ್ತು ಭೂ-ಸ್ವಾಧೀನಡಿಸಿಕೊಂಡ ಜಮೀನಿನ ವಿಸ್ತೀರ್ಣ ವೆಷ್ಟು; (ಗ್ರಾಮವಾರು ಮತ್ತು ಸರ್ವೆ ನಂಬರ್ ವಾರು ಪೂರ್ಣ ಮಾಹಿತಿ ನೀಡುವುದು;</td><td>ನೈಸ್ ಸಂಸ್ಥೆಗೆ ಹಸ್ತಾಂತರಿಸಿರುವ 5000ಎ-28ಗುಂಟೆ ಸರ್ಕಾರಿ ಜಮೀನಿನ ವಿಸ್ತೀರ್ಣ ಗ್ರಾಮವಾರು ಮತ್ತು ಸರ್ವೆ ನಂಬರ್‌ವಾರು ಪಟ್ಟಿಯನ್ನು ಅನುಬಂಧ-2ರಲ್ಲಿ ಲಗತ್ತಿಸಿದೆ.<br><br>ಭೂಸ್ವಾಧೀನಪಡಿಸಿಕೊಂಡ ಜಮೀನಿನ ವಿಸ್ತೀರ್ಣದ ಹಸ್ತಾಂತರಿಸಿದ (2158ಎ-27ಗು) ಪಟ್ಟಿಯನ್ನು ಅನುಬಂಧ-3ರಲ್ಲಿ ಲಗತ್ತಿಸಿದೆ.</td></tr>
</table>

| | | |
|---|---|---|
| ಇ) | ಸರ್ಕಾರವು ನೈಸ್ ಸಂಸ್ಥೆಗೆ ಹಸ್ತಾಂತರಿಸಿದ ಜಮೀನಿನ ವಿಸ್ತೀರ್ಣದಲ್ಲಿ ಫೆರಿಫೆರಲ್ ರಿಂಗ್ ರಸ್ತೆ ಮತ್ತು ಲಿಂಕ್ ರಸ್ತೆ ಹಾಗೂ ಇತರೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ನೈಸ್ ಸಂಸ್ಥೆ ಬಳಸಿಕೊಂಡಿರುವ ಜಮೀನಿನ ವಿಸ್ತೀರ್ಣವೆಷ್ಟು; ಗ್ರಾಮವಾರು ಮತ್ತು ಸರ್ವೆ ನಂಬರ್‌ವಾರು ಪೂರ್ಣ ಮಾಹಿತಿ ನೀಡುವುದು; | ಸರ್ಕಾರವು ನೈಸ್ ಸಂಸ್ಥೆಗೆ ಹಸ್ತಾಂತರಿಸಿದ ಜಮೀನಿನ ವಿಸ್ತೀರ್ಣದಲ್ಲಿ ಫೆರಿಫೆರಲ್ ರಿಂಗ್ ರಸ್ತೆ ಮತ್ತು ಲಿಂಕ್ ರಸ್ತೆ ಹಾಗೂ ಇತರೆ ಮೂಲ ಸೌಕರ್ಯಗಳನ್ನು ಕಲ್ಪಿಸಲು ನೈಸ್ ಸಂಸ್ಥೆ ಬಳಸಿಕೊಂಡಿರುವ ಜಮೀನಿನ ವಿಸ್ತೀರ್ಣ ಫೆರಿಫೆರಲ್ ರಿಂಗ್ ರಸ್ತೆಗೆ 830ಎ-28.8ಗುಂಟೆ **(ಅನುಬಂಧ-4)** ಹಾಗೂ ಲಿಂಕ್ ರಸ್ತೆಗೆ 140ಎ-00.08 ಗುಂಟೆ ವಿಸ್ತೀರ್ಣದ ಜಮೀನುಗಳನ್ನು **(ಅನುಬಂಧ-5)** ಎಂದು ಗುರುತಿಸಲಾಗಿದೆ. |
| ಈ) | ಇತ್ತೀಚಿನ ಸುಪ್ರೀಂಕೋರ್ಟ್ ಆದೇಶದಲ್ಲಿ ಕ್ರಿಯಾಯೋಜನೆಗೆ ರಾಜ್ಯ ಸರ್ಕಾರ ಮತ್ತು ನೈಸ್ ಸಂಸ್ಥೆ ಬದ್ಧವಾಗಿ ಯೋಜನಯನ್ನು ಕಾರ್ಯಗತಗೊಳಿಸಲು ಆದೇಶ ನೀಡಿರುವುದು ನಿಜವೇ; ಹಾಗಿದ್ದಲ್ಲಿ, ಈ ಆದೇಶದನ್ವಯ ಉಭಯ ಪಕ್ಷಗಳು ಕೈಗೊಂಡಿರುವ ಕ್ರಮಗಳೇನು; ಮತ್ತು ಸಚಿವ ಸಂಪುಟದ ಉಪ-ಸಮಿತಿಯ ಶಿಫಾರಸ್ಸುಗಳೇನು;(ಪೂರ್ಣ ಮಾಹಿತಿ ನೀಡುವುದು) | CIVIL APPEAL NOs. 2116-2128/2020 ಕ್ಕೆ ಸಂಬಂಧಿಸಿದಂತೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ದಿನಾಂಕ:19.05.2020 ರ ಆದೇಶದ ಕಂಡಿಕೆ-67 ರಲ್ಲಿ ಈ ಕೆಳಕಂಡಂತೆ ತಿಳಿಸಲಾಗಿದೆ.<br>"Taking overall view of the matter, we have no hesitation in allowing the present appeals filed by the Planning Authority and the State of Karnataka and thereby setting aside the impugned judgment of the High Court with liberty to the Project Proponents to first approach the State (under Article 7 of the FWA) for its prior permission to allow them to deviate from the stipulations and specifications in the FWA and the PTR. Upon consideration of such proposal, the competent authority of the State may take appropriate decision in the matter and if need be, obtain prior opinion of the Empowered committee".<br>ನೈಸ್ ಸಂಸ್ಥೆಯವರು ಬಡಾವಣೆ ನಿರ್ಮಾಣ ಮಾಡಲು ದಿನಾಂಕ:22.03.2022 ರಂದು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಸದರಿ ಪ್ರಸ್ತಾವನೆಯನ್ನು ತಿರಸ್ಕರಿಸಲಾಗಿದೆ.<br>ದಿನಾಂಕ:27.03.2023 ರಂದು ನಡೆದ ಸಚಿವ ಸಂಪುಟ ಉಪ ಸಮಿತಿ ಸಭೆಯ ಶಿಫಾರಸ್ಸುಗಳು/ನಿರ್ದೇಶನಗಳು ಈ ಕೆಳಕಂಡಂತಿವೆ.<br>1. Cancellation/rescission/rectification of the agreement entered into between KIADB and the project proponent dated 14.10.1998 be sought for, in accordance with law;<br>2. The department to take appropriate steps for releasing non-FWA lands from acquisition, in accordance with law;<br>3. Carry out an exercise of reconciliation in respect of non-FWA lands utilized for the BMICP and work out a scheme for release of equivalent extent of unutilized FWA lands, in accordance with law;<br>4. The department to take appropriate steps for recovering possession of land in excess of the project proponent's entitlement as set out in para 51 of the judgment in Somashekar Reddy's case and non-FWA government lands, especially lake lands, graveyards, commons lands, etc. from the project proponent, in accordance with law;<br>5. Cancellation of sale deeds executed for project lands be sought for, in accordance with law; |

| | | |
|---|---|---|
| | | 6. Revision of ODP to bring it in line with FWA read with PTR be initiated, in accordance with law;<br>7. All other pending issues to be addressed in accordance with law. |
| ಉ) | ಸಚಿವ ಸಂಪುಟದ ಉಪ-ಸಮಿತಿಯ ಶಿಫಾರಸ್ಸಿನ ಅನ್ವಯ ಸರ್ಕಾರ ಫೆರಫೆರಲ್ ರಿಂಗ್ ರಸ್ತೆ ಮತ್ತು ಲಿಂಕ್ ರಸ್ತೆಗೆ ಸಂಬಂಧಿಸಿ ಜಮೀನುಗಳ ಸರ್ವೆ ಯನ್ನು ನಡೆಸಲಾಗಿದೆಯೇ; ಹಾಗಿದ್ದಲ್ಲಿ ಈ ಸರ್ವೆಯ ಫಲಿತಾಂಶವೇನು; ಮತ್ತು ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳು ಯಾವುವು? (ಪೂರ್ಣ ಮಾಹಿತಿ ನೀಡುವುದು) | ಸಚಿವ ಸಂಪುಟದ ಉಪ-ಸಮಿತಿಯ ಶಿಫಾರಸ್ಸಿನ ಅನ್ವಯ ಫೆರಿಫೆರಲ್ ರಿಂಗ್ ರಸ್ತೆ ಮತ್ತು ಲಿಂಕ್ ರಸ್ತೆಗೆ ಸಂಬಂಧಿಸಿದಂತೆ ಜಮೀನುಗಳ ಸರ್ವೇ ಕಾರ್ಯ ಪ್ರಗತಿಯಲ್ಲಿರುತ್ತದೆ. |

**ಸಂಖ್ಯೆ: ಸಿಐ 48 ಐಎಪಿ 2024**

(ಎಂ.ಬಿ. ಪಾಟೀಲ)
**ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು.**